ಮೂರ್ನಾಲ್ಕು ವರ್ಷ ಕಳೆಯುವಷ್ಟರಲ್ಲಿ ಹಂಚುಗಳೇ ಇಲ್ಲದ ಆರ್.ಸಿ.ಸಿ. ಮನೆಗಳು ನನ್ನ ಮನಸ್ಸನ್ನಾವರಿಸಿಕೊಂಡಿದ್ದವು. ಮಳೆಗಾಲ ಶುರುವಾಯಿತೆಂದರೆ ಮನೆಯೊಳಗೆಲ್ಲಾ ಷವರ್ ಬಾತ್ ಮಾಡಿಸುವ ಹಂಚಿನ ಮನೆ ನೋಡಿ ಬೇಸತ್ತಿದ್ದ ನನಗೆ ಸಾಯುವುದರೊಳಗೆ ಒಮ್ಮೆಯಾದರೂ ಆರ್.ಸಿ.ಸಿ. ಮನೆಯಲ್ಲಿ ವಾಸ ಮಾಡಬೇಕೆನ್ನುವ ಆಸೆ ಬಲಿತಿತ್ತು. ಅದಕ್ಕೆ ಸರಿಯಾಗಿ ಬೆಂಗಳೂರಿನಲ್ಲೆಲ್ಲೋ ಇದ್ದ ನಮ್ಮ ಮನೆಯ ಮಾಲೀಕರು ನಿವೃತ್ತಿ ಹೊಂದಿ ನಮ್ಮೂರಿಗೆ ವಾಪಸ್ ಬರುವಂತಾಗಿ ನಾವು ಮನೆ ಖಾಲಿ ಮಾಡಬೇಕಾಯಿತು. ಅವಸರಕ್ಕೆ ಯಾವುದೋ ಆರ್.ಸಿ.ಸಿ. ಮನೆಗೇ ಬಾಡಿಗೆದಾರರಾಗಿ ಹೋದೆವು. ಟೆರೇಸಿನಲ್ಲಿ ದಿನಾ ರಾತ್ರಿ ಜಗತ್ತಿನ ರಾಜ ನಾನೇ ಎಂಬಂತೆ ಭಾವಿಸಿಕೊಂಡು ಸುಖಾಸುಮ್ಮನೇ ಸ್ಟೈಲಾಗಿ ನಿಲ್ಲುತ್ತಿದ್ದ ನನಗೆ ಎರಡು ವರ್ಷ ಕಳೆಯುವುದರೊಳಗೇ ಆರ್.ಸಿ.ಸಿ. ಮನೆಯೂ ಬೋರು ಹೊಡೆಸಿಬಿಟ್ಟಿತು. ಮಳೆಗಾಲದಲ್ಲಿ ಸ್ವಲ್ಪ ಅನುಸರಿಸಿಕೊಂಡು ಹೋಗಿದ್ದರೆ ಬೇಸಿಗೆಯಲ್ಲೂ ತಂಪಾಗಿರುತ್ತಿದ್ದ ಹಂಚಿನ ಮನೆಯ ಎದುರು ಬೇಸಿಗೆ ಬಂದರೆ ಸಾಕು, ಕಾದ ಬಾಣಲೆಯಂತಾಗುತ್ತಿದ್ದ ಆರ್.ಸಿ.ಸಿ. ಮನೆ ಅಸಹನೀಯವೆನ್ನಿಸತೊಡಗಿತ್ತು. ಅದಕ್ಕೆ ಸರಿಯಾಗಿ ಮತ್ತೆ ನಾವು ಮನೆ ಬದಲಾಯಿಸುವಂತಾಗಿ ಈ ಬಾರಿ ಸಾಕಷ್ಟು ಹಳೆಯ ಹಂಚಿನ ಮನೆಯೊಂದಕ್ಕೆ ಹೋದೆವು. ಹಿಂದೆ ಯಾವಾಗಲೋ ತಾಲ್ಲೂಕು ಸೊಸೈಟಿಯಾಗಿದ್ದ ಆ ಮನೆಗೆ ಅದಾಗಲೇ ಅರವತ್ತು ವರ್ಷಕ್ಕೂ ಹೆಚ್ಚು ವಯಸ್ಸಾಗಿತ್ತು. ಕಂಬಗಳು, ಲೈಟ್ ಸ್ವಿಚ್ಚುಗಳು, ಬಾಗಿಲು, ಅಗಳಿ, ಕಿಟಕಿ ಎಲ್ಲವೂ ಹಳೇ ಕಾಲದ ವಿನ್ಯಾಸಗಳಲ್ಲಿದ್ದಿದ್ದರಿಂದ ಮನೆಯೊಳಗಿದ್ದರೆ ಯಾವುದೋ ಕಳೆದುಹೋದ ಮಾಯಾಲೋಕಕ್ಕೆ ಹೋದಂತೆನಿಸುತ್ತಿತ್ತು!

ಹೀಗೆ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಮಾತನ್ನು ಶಿರಸಾವಹಿಸಿ ಪಾಲಿಸುತ್ತಿರುವ ನಮಗೆ ಪ್ರತೀ ಮನೆಯೂ ಹೊಸದೊಂದು ಪರಿಸರವನ್ನು, ಹೊಸದೊಂದು ಅನುಭೂತಿಯನ್ನು ಕೊಟ್ಟಿದೆ. ಈ ಬಾರಿ ದೀಪಾವಳಿಯಲ್ಲಿ ಹಂಚಿನ ಮೇಲೆ ಹೂಕುಂಡ ಹಚ್ಚುವ ನಾವು ಮುಂದಿನ ವರುಷ ಟೆರೇಸ್ ಮೇಲೆ ರಾಕೆಟ್ ಹಾರಿಸುತ್ತಿರಬಹುದು. ಇಂತಹ ಸತತ ಬದಲಾವಣೆಯ ಅದ್ಭುತ ಬದುಕು ಸ್ವಂತ ಮನೆಯಿಂದ ಎಲ್ಲಿ ಸಿಗುವುದಕ್ಕೆ ಸಾಧ್ಯ? ಒಮ್ಮೆ ಮನೆ ಕಟ್ಟಿಕೊಂಡುಬಿಟ್ಟರೆ ಆ ಮನೆ ಶಿಥಿಲವಾಗಿ ಬೀಳುವವರೆಗೂ ಅಲ್ಲಿಯೇ ಇರಬೇಕು, ಹೆಚ್ಚೆಂದರೆ ಆಗಾಗ ಬಣ್ಣ ಬಳಿದುಕೊಳ್ಳಬಹುದು ಅಷ್ಟೇ! ಅದಕ್ಕೇ ಹೇಳೋದು, ಬಾಡಿಗೆ ಮನೆಯೇ ಭರ್ಜರಿ ಅಂತ. ಇನ್ನು ಅಪ್ಪ–ಅಮ್ಮನಂತೂ ಸಸ್ಯಪ್ರಿಯರು. ಹೀಗಾಗಿ ನಾವು ವಾಸವಿದ್ದ ಮನೆಯಲ್ಲೆಲ್ಲ ಲಿಂಬೆಹಣ್ಣಿನ ಗಿಡ, ಹಸಿಮೆಣಸು, ಟೊಮೆಟೊ, ಬೀನ್ಸು, ಮಲ್ಲಿಗೆ, ದಾಸವಾಳ, ಶಂಖಪುಷ್ಪ ಹೀಗೆ ಸ್ಥಳಾವಕಾಶಕ್ಕೆ ತಕ್ಕಂತೆ ತರಹೇವಾರಿ ಕೃಷಿ ಮಾಡಿಬಿಟ್ಟಿದ್ದಾರೆ. ಆ ಮನೆಗಳಲ್ಲಿ ನಮ್ಮ ನಂತರ ವಾಸಕ್ಕೆ ಬಂದವರು ಲಿಂಬೆಹಣ್ಣಿನ ಶರಬತ್ತು ಮಾಡಿ ಕುಡಿಯುವಾಗಲೋ, ತಲೆಗೆ ಮಲ್ಲಿಗೆ ಹೂವು ಮುಡಿಯುವಾಗಲೋ, ಟೊಮೆಟೊ ಸಾರು ಮಾಡುವಾಗಲೋ 'ಈ ಗಿಡ ನೆಟ್ಟವರಿಗೆ ಪುಣ್ಯ ಬರಲಿ' ಎಂದು ಒಮ್ಮೆಯಾದರೂ ಅಂದುಕೊಂಡಿದ್ದರೆ ಬರುವ ಆ ಪುಣ್ಯದಲ್ಲಿ ಬಾಡಿಗೆ ಮನೆಯದ್ದೂ ಅರ್ಧ ಪಾಲಿದೆ.

ಸ್ವಂತ ಮನೆ ಕಟ್ಟಿಸಹೊರಟ ವ್ಯಕ್ತಿ ಮನೆ ಕಟ್ಟಿ ಮುಗಿಯುವಷ್ಟರಲ್ಲಿ ಹೊಸ ಮನುಷ್ಯನೇ ಆಗಿಬಿಟ್ಟಿರುತ್ತಾನಂತೆ. ಎಲ್ಲಿ ಬಾತ್ರೂಮು, ಎಲ್ಲಿ ದೇವರ ಮನೆ. ಎಲ್ಲಿ ಅಡುಗೆ ಮನೆ ಎಂದು ವಾಸ್ತುಪ್ರಕಾರ ನಿರ್ಧರಿಸಿ ಇಂಜಿನಿಯರ್ ಜೊತೆ ಕೂತು ತಲೆಕೆರೆದುಕೊಂಡು ಪ್ಲಾನು ಮಾಡಿ, ಪಾಯಕ್ಕೆಂದು ಒಂದೊಂದೇ ಇಟ್ಟಿಗೆ ಕೂಡುತ್ತಿರುವಂತೆಯೇ ಒತ್ತಡ ಜಾಸ್ತಿಯಾಗಿ ಒಂದೊಂದೇ ಕೂದಲು ಬಿಳಿ ಮಾಡಿಕೊಂಡು, ಮಧ್ಯದಲ್ಲೆಲ್ಲೋ ದುಡ್ಡು ಸಾಲದಾದಾಗ ಅಧಿಕ ಬಡ್ಡಿಗೆ ಎಲ್ಲೆಲ್ಲಿಂದಲೋ ಸಾಲ ಪಡೆದು, ಪ್ಲಾನು ಪ್ರಕಾರ ಮನೆ ಬರುತ್ತಿದೆಯೋ ಇಲ್ಲವೋ ಎಂಬ ಚಿಂತೆಯಲ್ಲಿ ನಿದ್ರೆಗೆಟ್ಟು, ಮನೆ ಕಟ್ಟಿ ಬಣ್ಣ ಬಳಿದ ಮೇಲೆ ತಾಲೂಕು ಕಚೇರಿ, ವಾಟರ್ ಬೋರ್ಡು ತಿರುಗಿ, ಪ್ಲಂಬರು, ಎಲೆಕ್ಟ್ರಿಷಿಯನ್ನುಗಳ ಹಿಂದೆ ಅಡ್ಡಾಡಿ ಮನೆಗೆ ನೀರು ಮತ್ತು ಬೆಳಕನ್ನು ತಂದು, ಉಳಿದಪಳಿದ ಹಣವನ್ನೆಲ್ಲಾ ಸೇರಿಸಿ ಅದ್ದೂರಿಯಾಗಿ ಗೃಹಪ್ರವೇಶ ಮಾಡಿ ಪರಿಚಯಸ್ಥರು ಮತ್ತು ಬಂಧುಗಳಿಗೆಲ್ಲಾ ಊಟ ಹಾಕಿಸಿ, ಕೊನೆಗೂ ತನ್ನ ಸ್ವಂತ ಮನೆಯ ಸ್ವಂತ ಸೋಫಾದ ಮೇಲೆ ಕೂರುವಷ್ಟರಲ್ಲಿ ಪರಮ ಹೈರಾಣಾಗಿರುವ ಆತ ಯಾರಾದರೂ ಮನೆ ಕಟ್ಟುತ್ತಾರೆಂದರೆ ತಾನೇ ಮುಂದೆ ನಿಂತು ಪ್ಲಾನು ಮಾಡಿಕೊಡುವಷ್ಟು ಅನುಭವಸ್ಥನಾಗಿರುತ್ತಾನೆ. ಹಾಗಾದರೆ ಬಾಡಿಗೆ ಮನೆಯವರು ಏನೂ ಕಲಿಯುವುದೇ ಇಲ್ಲವಾ ಎಂದರೆ ಖಂಡಿತಾ ಕಲಿಯುತ್ತೇವೆ. ಎಲ್ಲಾ ಸಲವೂ ಎಲ್ಲಾ ವ್ಯವಸ್ಥೆಗಳೂ ನಮಗೆ ಬೇಕಾದಂತೆಯೇ ಇರುವ ಪರಿಪೂರ್ಣ ಮನೆಗಳು ಸಿಗುವುದಿಲ್ಲ. ಕೆಲವೊಂದು ನ್ಯೂನತೆಗಳಿಗೆ ನಾವು ಹೊಂದಿಕೊಂಡು ಹೋಗಬೇಕಾಗುತ್ತದೆ. ನಾವು ಹೋಗುವ ಮನೆಯಲ್ಲಿ ಬಟ್ಟೆ ಒಗೆಯುವ ಕಲ್ಲು ಇಲ್ಲ ಎಂದರೆ ಬಚ್ಚಲುಮನೆಯಲ್ಲೇ ಬಟ್ಟೆ ಒಗೆಯಲು ಕಲಿಯುತ್ತೇವೆ. ಸೈಕಲ್ ನಿಲ್ಲಿಸಲು ಜಾಗವಿಲ್ಲ ಎಂದರೆ ಎತ್ತಿ ಅಟ್ಟಕ್ಕೆ ಹಾಕಿಬಿಡುತ್ತೇವೆ. ಮೊಳೆ ಹೊಡೆಯುವಂತಿಲ್ಲ ಎಂದು ಮಾಲೀಕರು ತಾ ಕೀ ತು

